Sri N. CHIKKE GOWDA.—The entire crop has not been lost. There is little damage caused which ranges from 10 to 15 per cent in certain pockets. By this it does not mean that the Government should take up all the works there. Farmers have better work to do. However, we have taken up incomplete soil conseruation works to be completed.

Sri BAPU GOWDA.—I donot wish to part Question 202.

FISHERIES HIGH SCHOOL IN THE STATE

310. **Sri A. G. KODGI** (Baindur).—

Will the Minister of State for Fisheries and Horticulture be pleased to state :—

(*a*) the total strength of students in each Government Fisheries High School of the State ;

(*b*) the total staff employed in each Government Fisheries High School of the State ;

(*c*) the names of Fisheries High Schools without any buildings provided by Government ?

Sri K. T. RATHOD (Minister of State for Fisheries and Horticulture).—

(*a*) Government Fisheries

High School	1	Hejmadikodi	...	157
do	2	Kemmannu	...	366
do	3	Hadavinkone	...	144
do	4	Malpe	...	358
do	5	Pohppu	...	216
do	6	Padubidri	...	102
do	7	Navunda	...	118
do	8	Udiawar	...	253
do	9	Yermalbada	...	135
do	10	Someswar Uchil	...	260
do	11	Baikampadi	...	165
	12	Haklady	...	40
	13	Moolur	...	138
	14	Thekkatte	...	74
	15	Beejady	...	14
	16	Uppunda	...	73
	17	Karwar	...	21
	18	Keni, Ankola	...	38

(*b*) Government Fisheries

High School	1	Hejmadikodi	...	12
do	2	Kemmannu	...	17
do	3	Hadavinakone	...	9
do	4	Malpe	...	24
do	5	Polippu	...	13
do	6	Padubidri	...	10
do	7	Navunda	...	11
do	8	Udiawar	...	13
do	9	Yermal Bada	...	10
do	10	Someswar Uchil	...	12
do	11	Baikampady	...	11
	(duty report of one teacher yet to be received)			
do	12	Haklady	...	8
do	13	Moolur	...	10
	(one under orders of transfer)			
do	14	Thekkatte	...	6
	(joining report of one is yet to be received)			
do	15	Beejady	...	4
	16	Uppunda	...	4
	17	Karwar	...	9
	18	Keni Ankola	...	9

(*c*) Government Fisheries

High Schools	1	Someswar Uchil	...	S. K. Dist.
do	2	Baikenu Pady	...	do
do	3	Moolur	...	do
do	4	Udayawar	...	do
	5	Thekkatte	...	do
	6	Bijady	...	do
	7	Uppunda	...	do
	8	Haklady	...	do
	9	Padubidri	...	do
	10	Keni, Ankola	...	N. K. Dist.

ಶ್ರೀ ಎ. ಜಿ. ಕೊಡ್ಗಿ.—ವಿದ್ಯಾರ್ಥಿಗಳ ಸಂಖ್ಯೆ ಮತ್ತು ಸಂಬಂಧಪಟ್ಟ ಶಾಲೆಗಳಲ್ಲಿ ಅಧ್ಯಾಪಕರ ಸಂಖ್ಯೆಯನ್ನು ಕಂಡಾಗ, ಉಪಾಧ್ಯಾಯರ ನೇಮಕಕ್ಕೂ ವಿದ್ಯಾರ್ಥಿಗಳ ಸಂಖ್ಯೆಗೂ ಏನಾದರೂ ಸಂಬಂಧ ಇದೆಯೇ ಅಥವಾ ಈ ಇಲಾಖೆಯಲ್ಲಿ ಅಧಿಕಾರಿಗಳು ಮನಸೋ ಇಚ್ಛೆ ಉಪಾಧ್ಯಾಯರುಗಳನ್ನು ನೇಮಕಮಾಡಬಹುದೇ—ಇದಕ್ಕೆ ಉತ್ತರ ಕೊಡುತ್ತೀರಾ ?

ಶ್ರೀ ಕೆ. ಟಿ. ರಾಥೋಡ್.—ಮಾನ್ಯ ಸದಸ್ಯರು ತಿಳಿದುಕೊಂಡಿರುವ ಹಾಗೆ ಅಲ್ಲಿರುವಂಥ ವಿದ್ಯಾರ್ಥಿಗಳ ಸಂಖ್ಯೆಗೂ, ಶಿಕ್ಷಕರಿಗೂ ಸಾಮಾನ್ಯವಾಗಿ ಸಂಬಂಧ ಇರುತ್ತದೆ. ಆದರೆ ಶಿಕ್ಷಕರನ್ನು ಕೊಡುವಾಗ ಅಲ್ಲಿ ಕಲಿಸುವಂಥ ವಿಷಯಗಳನ್ನು ಅವಲಂಬಿಸಿರುತ್ತದೆ. ಹಾಗೆ ಪ್ರಥಮವಾಗಿ ಶುರು ಮಾಡುವಾಗ ಯಾವ ಯಾವ ವಿಷಯಕ್ಕೆ ಎಷ್ಟು ಸ್ಟ್ರೆಂಗ್ತ್ ಇರುತ್ತದೆ ಎನ್ನುವುದನ್ನು ಅವಲಂಬಿಸಿ ಟೀಚರ್ಸ್ ಇರುತ್ತಾರೆ. ಮುಂದೆ ವಿದ್ಯಾರ್ಥಿಗಳ ಸಂಖ್ಯೆ ಬೆಳೆದ ಪ್ರಮಾಣದಲ್ಲಿ ಟೀಚರ್ಸ್‌ನ್ನು ಕೊಡುವ ಉದ್ದೇಶವನ್ನು ಇಲಾಖೆಯವರು ಇಟ್ಟುಕೊಂಡಿದ್ದಾರೆ. ಆದರೆ ಕೆಲವು ಕಡೆ ಹೆಚ್ಚು ಕಡಿಮೆ ಆಗಿರಬಹುದುದು. ಎಲ್ಲಿ ಸಾಕಷ್ಟು ಉಪಾಧ್ಯಾಯರು ಇಲ್ಲವೋ ಅಲ್ಲಿ ಅಧ್ಯಾಪಕರನ್ನು ಕೊಡುವುದಕ್ಕೆ ಏರ್ಪಾಡು ಮಾಡಿದೆ.

ಶ್ರೀ ಎ. ಜಿ. ಕೊಡ್ಗಿ.—ತೆಕ್ಕಾಟೆಯಲ್ಲಿ 74, ಬೀಜಾಡಿಯಲ್ಲಿ 14, ಉಪ್ಪುಂದದಲ್ಲಿ 74 ವಿದ್ಯಾರ್ಥಿಗಳ ಸಂಖ್ಯೆ ಇದೆ. ತಾವು ಉಪಾಧ್ಯಾಯರುಗಳನ್ನು ತಕ್ಕಾಟೆಗೆ 6, ಬೀಜಾಡಿಗೆ 4, ಮತ್ತು ಉಪ್ಪುಂದಕ್ಕೆ 4 ಜನರನ್ನು ಕೊಟ್ಟಿದ್ದೀರಿ. ವಿದ್ಯಾರ್ಥಿಗಳಿಗೂ ಮತ್ತು ಅಧ್ಯಾಪಕರಿಗೂ ಏನಾದರೂ ಸಂಬಂಧವಿದೆಯೇ ? ಏನಾದರೂ ಹೆಚ್ಚು ಕಡಿಮೆ ಇದ್ದರೆ ಅದನ್ನು ಸರಿಪಡಿಸಿ, ಉಪಾಧ್ಯಾಯರನ್ನು ಶೀಘ್ರವಾಗಿ ಒದಗಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

1-30 P. M.

ಶ್ರೀ ಕೆ. ಟಿ. ರಾಥೋಡ್.—ಹೋದ ವರ್ಷವೇ ಅಲ್ಲಿ ಕ್ಲಾಸ್‌ಗಳನ್ನು ಪ್ರಾರಂಭ ಮಾಡಲಾಗಿದೆ. ಕ್ರಮಕ್ರಮವಾಗಿ ಬೇರೆ ಬೇರೆ ವರ್ಗಗಳನ್ನು ಹೆಚ್ಚು ಮಾಡುತ್ತಾ ಹೋಗುತ್ತೇವೆ. ಇದೇ ರೀತಿ ಕೆಲವು ಕಡೆ ಸಂಖ್ಯೆ ಹೆಚ್ಚಾಗಿರಬಹುದು. ಎಲ್ಲಿ ಕಡಿಮೆ ಶಿಕ್ಷಕರು ಇರುತ್ತಾರೋ ಅಂಥಾ ಕಡೆಗಳಿಗೆ ಶಿಕ್ಷಕರನ್ನು ಕೊಡುತ್ತೇವೆ. ಹೆಚ್ಚು ಜನ ವಿದ್ಯಾರ್ಥಿಗಳು ಇದ್ದು, ಹೆಚ್ಚು ವರ್ಗಗಳನ್ನಾಗಿ ಮಾಡಿ ನಡೆಸುವುದಕ್ಕೆ ಸಾಧ್ಯವಿದ್ದರೆ ಆ ರೀತಿ ನಡೆಸಬೇಕಾಗುತ್ತದೆ. ಹೆಚ್ಚಿಗೆ ವರ್ಗಗಳ ಕ್ಲಾಸನ್ನು ನಡೆಸಬೇಕೆನ್ನುವ ದೃಷ್ಟಿಯಿಂದ ಹೆಚ್ಚಿನ ಶಿಕ್ಷಕರನ್ನು ಕೊಡುವುದು ಅವಶ್ಯಕವೆಂದು ಕೊಡುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ ನಿಮ್ಮ ಸ್ಟೇಟ್‌ಮೆಂಟಿನಲ್ಲಿ ಕೊಟ್ಟಿರುವ ಪ್ರಕಾರ ಕೇಣಿ, ಅಂಕೋಲ ಇಲ್ಲಿ 38 ಜನ ಹುಡುಗರು ಇದ್ದಾರೆ, ಇನ್ನೊಂದು ಕಡೆ ಬೀಜಡಿಯಲ್ಲಿ 14 ಜನ ಇದ್ದಾರೆ, ಕನಿಷ್ಟ ಪಕ್ಷ 35 ಜನ ಹುಡುಗರಾದರೂ ಇರಬೇಕು ಎನ್ನುತಕ್ಕಂಥದ್ದು. ಸರ್ಕಾರಿ ನಿಯಮ ವಿದೆ, ಹೀಗಿದ್ದರೂ ಕೂಡ ಬೀಜಡಿಯಲ್ಲಿ ಕಡಿಮೆ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದಾಗ್ಯೂ ಅಂಥ ಕಡೆ ಹೈಸ್ಕೂಲ್‌ಗಳನ್ನು ಏತಕ್ಕೆ ಪ್ರಾರಂಭ ಮಾಡಿದ್ದೀರಿ ?

ಶ್ರೀ ಕೆ. ಟಿ. ರಾಥೋಡ್.—ಅಲ್ಲಿಯ ಸ್ಥಳೀಯ ಮಹನೀಯರುಗಳ ಬೇಡಿಕೆ ಇದ್ದುದರಿಂದ ಹಾಗೂ ಅಲ್ಲಿ ಶಾಲೆಯನ್ನು ತೆರೆಯುವಂಥ ಅವಶ್ಯಕತೆ ಕಂಡುಬಂದುದರಿಂದ ಅಲ್ಲಿ ಶಾಲೆಯನ್ನು ಪ್ರಾರಂಭ ಮಾಡಿದ್ದೇವೆ. ಅಲ್ಲಿಯ ಕೆಲವು ವಿದ್ಯಾರ್ಥಿಗಳು ಅಲ್ಲಿಯೇ ನವಿಾಪದಲ್ಲಿರುವ ಬೇರೆ ಬೇರೆ ಹೈಸ್ಕೂಲ್‌ಗಳಿಗೆ ಹೋಗಿ ಸೇರಿಕೊಂಡಿರಬಹುದು. ಇದರಿಂದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಯಾಗಿರಬಹುದು. ಪ್ರತಿ ವರ್ಷವೂ ವಿದ್ಯಾರ್ಥಿಗಳ ಸಂಖ್ಯೆ ಇಷ್ಟೇ ಇದ್ದರೆ ಅಂಥ ಹೈಸ್ಕೂಲ್‌ಗಳನ್ನು ಮುಚ್ಚಬೇಕಾದಂಥ ಸಂದರ್ಭ ಬಂದರೆ ಹಾಗೆ ಮಾಡಬೇಕಾಗುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು.—ಸ್ವಾಮಿ ತಮ್ಮ ಸ್ಟೇಟ್‌ಮೆಂಟನ್ನು ನೋಡಿದರೆ ಈ ಹೈಸ್ಕೂಲ್‌ಗಳನ್ನು ಬರೀ ಕರಾವಳಿ ಪ್ರದೇಶದಲ್ಲಿ ಮಾತ್ರ ಓಪನ್ ಮಾಡಿದ ಹಾಗೆ ಇದೆ. ಒಳನಾಡಿನಲ್ಲಿ ಇಂಥ ಶಾಲೆಗಳನ್ನು ಓಪನ್ ಮಾಡುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಟಿ. ರಾಥೋಡ್.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಈ ಶಾಲೆಗಳನ್ನು ತೆಗೆಯುವಾಗ, ಅವಶ್ಯಕವಾಗಿ ಕರಾವಳಿ ಪ್ರದೇಶಗಳಲ್ಲಿರತಕ್ಕ ಮೀನುಗಾರ ಬಂಧುಗಳಿಗೆ ಅನುಕೂಲವಾಗುವುದರಿಂದ ಅಲ್ಲಿ ಪ್ರಾರಂಭ ಮಾಡಿದ್ದೇವೆ. ಅದೂ ಅಲ್ಲದೇನೆ ಪ್ರಪ್ರಥಮವಾಗಿ ಅದು ಮದ್ರಾಸ್‌ನವರ ಆಡಳಿತದಲ್ಲಿದ್ದಾಗ ಅವರು ಈ ಕಾರ್ಯಕ್ರಮವನ್ನು ಕೈಕೊಂಡಿದ್ದನ್ನು ನಾವು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಒಳನಾಡಿನಲ್ಲಿಯೂ ಕೂಡ ಹೈಸ್ಕೂಲ್‌ಗಳನ್ನು ಮತ್ತು ಹೈಮರಿ ಸ್ಕೂಲ್‌ಗಳನ್ನು ತೆರೆಯುವಂಥ ಅವಶ್ಯಕತೆ ಇದೆ ಎಂದು ಮಾನ್ಯ ಸದಸ್ಯರು ಹೇಳಿದರು. ಆದರೆ ಅಲ್ಲಿಯ ಪರಿಸ್ಥಿತಿಯೇ ಬೇರೆ ಕರಾವಳಿ ಪ್ರದೇಶದ ಪರಿಸ್ಥಿತಿಯೇ ಬೇರೆ. ಅಲ್ಲಿಯ ಜನರಿಗೆ ನಾವು ಇದನ್ನು ಎಜುಕೇಷನ್ ಮತ್ತು ಫಿಷಿಂಗ್ ದೃಷ್ಟಿಯಿಂದ ಮಾತ್ರವಲ್ಲದೆ ಆ ಜನರ ಸೋಶಿಯಲ್ ಮತ್ತು ಎಕನಾಮಿಕ್ ಕಂಡೀಷನ್ ದೃಷ್ಟಿಯಿಂದ ವಿದ್ಯಾಭ್ಯಾಸವನ್ನು ಕಲಿಸುವಂಥ ಅವಶ್ಯಕತೆ ಕಂಡುಬಂದುದರಿಂದ ಅಲ್ಲಿ ಇಂಥ ಹೈಸ್ಕೂಲ್‌ಗಳನ್ನು ಪ್ರಾರಂಭ ಮಾಡಿದ್ದೇವೆ ಇಲ್ಲದಿದ್ದರೆ ಪ್ರಾರಂಭ ಮಾಡುತ್ತಾ ಇರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ —ಸ್ವಾಮಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರೌಢ ಶಾಲೆಗಳು, ಕಾಲೇಜ್‌ಗಳು ಬೇರೆ ಎಲ್ಲಿಯೂ ಇಲ್ಲದಷ್ಟು ಇದ್ದಾಗ್ಯೂ ಸಹ, ಸರ್ಕಾರದ ಆಜ್ಞೆಗೆ ಅನುಸಾರವಾಗಿ ಪೂರ್ತಿ ಹುಡುಗರು ಇಲ್ಲದ ಕಡಿಮೆ ಸಂಖ್ಯೆಯಲ್ಲಿರತಕ್ಕಂಥ ಶಾಲೆಗಳನ್ನು ನೀವು ಇನ್ನೂ ಏತಕ್ಕೆ ಇಟ್ಟುಕೊಂಡಿದ್ದೀರಿ ? ಇದರಿಂದ ಸರ್ಕಾರದ ಹಣ ಅನಾವಶ್ಯಕವಾಗಿ ಲುಕ್ಸಾನು ಆಗುತ್ತಾ ಇಲ್ಲವೇ ?

ಶ್ರೀ ಕೆ. ಟಿ. ರಾಥೋಡ್.—ಅನಾವಶ್ಯಕವೆನಿಸಿದ್ದರೂ ಆ ಶಾಲೆಗಳನ್ನು ಪ್ರಾರಂಭ ಮಾಡ ಬೇಕೆಂದು ನಾವು ಏನೂ ಮಾಡಲಿಲ್ಲ. ನಾವು ಶಾಲೆಗಳನ್ನು ಅಲ್ಲಿ ಪ್ರಾರಂಭ ಮಾಡುವಾಗ ಎಲ್ಲ

ವನ್ನೂ ಪರಿಶೀಲನೆ ಮಾಡಿ ಅಲ್ಲಿ ಅವಶ್ಯಕತೆ ಇದೆ ಎಂದು ಕಂಡುಬಂದುದರಿಂದ ಪ್ರಾರಂಭ ಮಾಡಿದ್ದೇವೆ. ಒಂದು ವೇಳೆ ಅವಶ್ಯಕತೆ ಇಲ್ಲವೆಂದು ಈಗ ಕಂಡು ಬಂದರೆ ಅದನ್ನು ನಾವು ಮುಚ್ಚಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.— ಒಂದು ಶಾಲೆಯಲ್ಲಿ ಕನಿಷ್ಟ ಪಕ್ಷ 35 ಹುಡುಗರಾದರೂ ಇರಬೇಕೆಂದು ವಿದ್ಯಾ ಇಲಾಖೆಯ ಆಜ್ಞೆ ಇರುವುದನ್ನು ತಾವು ಒಪ್ಪಿಕೊಳ್ಳುವಾಗ ನಮ್ಮ ರಾಜ್ಯದಲ್ಲಿ ಯಾವ ಯಾವ ಶಾಲೆಗಳಲ್ಲಿ 35 ಹುಡುಗರಿಗಿಂತ ಕಡಿಮೆ ಸಂಖ್ಯೆಯಲ್ಲದ್ದರೆ ಅಂಥ ಶಾಲೆಗಳನ್ನು ತೆಗೆಯಬೇಕು.

ಅಧ್ಯಕ್ಷರು.—ಅವಶ್ಯಕತೆ ಇರುವಂಥ ಕಡೆಗಳಲ್ಲಿ ಶಾಲೆಗಳನ್ನು ಕೊಟ್ಟಿರುತ್ತಾರೆ. ಕೊಡದಿದ್ದರೆ ಕೊಡಲಿಲ್ಲವೆಂದು ಹೇಳುತ್ತೀರಿ. ಕೊಟ್ಟರೆ ಕೊಟ್ಟಿದ್ದಾರೆಂದು ಹೇಳಿದರೆ ಹೇಗೆ ?

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಕಣ್ಣಿಗೆ ಸುಣ್ಣ, ಮತ್ತೊಂದು ಕಣ್ಣಿಗೆ ಬೆಣ್ಣೆ ಆಗಬಾರದೆನ್ನುವ ದೃಷ್ಟಿಯಿಂದ ನಾನು ಹೇಳಿದ್ದು. ಸರ್ಕಾರದ ನೀತಿ ಏನಿದೆ ಅದರಂತೆ ನಡೆಯಬೇಕೆಂದು ನಾನು ಹೇಳಿದ್ದು.

ಶ್ರೀ ಎ ಜಿ. ಕೊಡಗಿ.—ಇವತ್ತು ಕೆಲವು ಕಡೆಗಳಲ್ಲಿ ಕಟ್ಟಡ ಇಲ್ಲದೇನೇ ಸಣ್ಣ ಸಣ್ಣ ಗುಡಿಸಲುಗಳಲ್ಲಿ, ಇನ್ನು ಯಾರದೋ ಮನೆಗಳಲ್ಲಿ ಹೈಸ್ಕೂಲ್‌ಗಳನ್ನು ನಡೆಸಬೇಕಾದಂಥ ಪರಿಸ್ಥಿತಿಗೆ ಒಳಗಾಗಿರುವುದರಿಂದ, ಅಂಥ ಕಡೆಗಳಿಗೆ ಕೂಡಲೇ ಕಟ್ಟಡವನ್ನು ಒದಗಿಸುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಕೆ. ಟಿ. ರಾಥೋಡ್.—ಈಗ ಅಲ್ಲಿರುವಂಥ ಹೈಸ್ಕೂಲ್‌ಗಳು ಒಟ್ಟು 18. ಅದರಲ್ಲಿ 10 ಹೈಸ್ಕೂಲ್‌ಗಳಿಗೆ ಕಟ್ಟಡಗಳಿವೆ ಎಂಬುದನ್ನು ತೋರಿಸಿದ್ದೇವೆ. ಇನ್ನು 3 ಹೊಸ ಹೈಸ್ಕೂಲ್‌ಗಳನ್ನು ಹೋದ ವರ್ಷ ಪ್ರಾರಂಭ ಮಾಡಿದ್ದೇವೆ. ಪ್ರಾರಂಭ ಮಾಡುವಾಗ ವಿದ್ಯಾ ಇಲಾಖೆಯವರ ನಿಯಮಗಳಿಗನುಸಾರವಾಗಿಯೇ ಪ್ರಾರಂಭ ಮಾಡಿದ್ದೇವೆ. ಅಲ್ಲಿ ನಾವು ಹೈಸ್ಕೂಲ್‌ಗಳನ್ನು ಪ್ರಾರಂಭ ಮಾಡುವಾಗ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವಂಥ ಮಹನೀಯರು ಬಿಲ್ಡಿಂಗ್‌ನ್ನು ಒದಗಿಸಿಕೊಡುತ್ತೇವೆ, ಎಲ್ಲಾ ಅನುಕೂಲತೆಗಳನ್ನು ಮಾಡಿಕೊಡುತ್ತೇವೆಂದು ಹೇಳಿದುದರಿಂದ ನಾವು ಅಲ್ಲಿಗೆ ಹೈಸ್ಕೂಲ್‌ನ್ನು ಸ್ಯಾಂಕ್ಷನ್ ಮಾಡಿರುತ್ತೇವೆ. ಅಲ್ಲಿಗೆ ಹೈಸ್ಕೂಲ್ ಸ್ಯಾಂಕ್ಷನ್ ಆದ ಮೇಲೆ ಕಟ್ಟಡ ಕೊಡಬೇಕೆಂದು ಹೇಳುವುದು ಒಂದು ವಿಚಾರ. ಹೀಗಿದ್ದಾಗ್ಯೂ ಕೂಡ ಅಲ್ಲಿಗೆ ಕಟ್ಟಡವನ್ನು ಒದಗಿಸಿ ಕೊಡಬಾರದೆಂದು ಏನೂ ಸರ್ಕಾರದ ಉದ್ದೇಶವಿಲ್ಲ. ನಮ್ಮ ಆರ್ಥಿಕ ಪರಿಸ್ಥಿತಿಯು ಮುಗ್ಗಟ್ಟಿನಿಂದ ನಮ್ಮ ಕಾರ್ಯಕ್ರಮ ಸ್ವಲ್ಪ ಮುಂದಕ್ಕೆ ಹಾಕಬೇಕಾಗುತ್ತದೆ.

Question No. 362 (*Contd.*)

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು 172 ನೇ ಪ್ರಶ್ನೆಗೆ ಹೆಚ್ಚಿನ ವಿವರಣೆಯನ್ನು ಕೇಳಿದ್ದರು, ಅದಕ್ಕಾಗಿ ತಮ್ಮ ಅಪ್ಪಣೆಯಮೇರೆಗೆ ನಾನು ಈಗ ಪುನಃ ಉತ್ತರವನ್ನು ನೀಡುತ್ತಿದ್ದೇನೆ.

ಕ್ಯಾಬಿನೆಟ್ ಡಿಸಿಷನ್ ಆದಹಾಗೆ ಇಲ್ಲ. ಮುಖ್ಯಮಂತ್ರಿಗಳು, ಮಂತ್ರಿಗಳು ಸೇರಿ ಚೆಕ್ನಿಕಲ್ ಅಡ್ವೈಜ್ ತೆಗೆದುಕೊಂಡು ಅದರ ಪ್ರಕಾರ ಉತ್ತರವನ್ನು ಕೊಟ್ಟು ಬಿಟ್ಟಿದ್ದಾರೆ. ಫೀಜಿಬಲಟಿ ಪ್ರಶ್ನೆ ಬಂದಿಲ್ಲ. ಕೊಯ್ನಾ ವಾಟರ್ಸ್ ಬೊಂಬಾಯಿ ಪ್ರಾಂತ್ಯಕ್ಕೆ ಸೇರಿದ್ದು. 1951ನೇ ಇಸವಿಯ ಪ್ಲಾನಿಂಗ್ ಕಮಿಷನ್ ಅವಾರ್ಡ್‌ನ್ನು ಕೊಯ್ನಾ ವಾಟರ್‌ನ್ನು ಹೇಗೆ ಉಪಯೋಗ ಮಾಡಬೇಕೆಂದು ಇದೆ. ಅದರ ಪ್ರಕಾರ 46 ಟಿ.ಎಂ.ಸಿ.ಎಫ್ ಟಿ. ನೀರು ನಮ್ಮ ಉಪಯೋಗಕ್ಕೆ ಬರುತ್ತದೆ ಎಂದು ಇತ್ತು. ಕೊಯ್ನಾ ಪ್ರಾಜೆಕ್ಟ್ ಬೇಗ ಬಂದುದರಿಂದ we reserve our right and yet allow you to go ahead with your construction of the dam. ಎಂದು ಹೇಳಿದ್ದಾರೆ. ಇಷ್ಟು ವಿಚಾರ, ಚೆಕ್ನಿಕಲ್ ಆಗಿ ಅವರು ಅಭಿಪ್ರಾಯ ಕೊಟ್ಟರು. ಚೆಕ್ನಿಕಲ್ ಇಂಜಿನಿಯರ್ಸ್ ಜೊತೆಗೆ ಸಹ ಚರ್ಚೆ ಮಾಡಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಹಾರಾಷ್ಟ್ರ ಸರ್ಕಾರದವರು ಕರ್ನಾಟಕ ಸರ್ಕಾರದವರನ್ನು ಕೇಳಿದರೂ ಸಹ ಸೇರದೆ ಇದ್ದುದಕ್ಕೆ ಕಾರಣವೇನು ? ಇದರಿಂದ ನಮ್ಮ ಕರ್ನಾಟಕ ರಾಜ್ಯಕ್ಕೆ ಧಕ್ಕೆ ಬಂದಂತೆ ಆಗಲಿಲ್ಲವೇ ? ಮತ್ತು ಇದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿರಲಿಲ್ಲ ; ಕೇವಲ ಮಂತ್ರಿಗಳ ಮಟ್ಟದಲ್ಲಿ ತೀರ್ಮಾನವಾಗಿತ್ತು ; ಮಂತ್ರಿಗಳ ಮಟ್ಟದಲ್ಲಿ ಆದ ತೀರ್ಮಾನ ಸರ್ಕಾರದ ತೀರ್ಮಾನವಾಗುತ್ತದೆಯೇ ?